RNU AIR DHARWAD

# NOVEMBER 08, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ರಾಷ್ಟ್ರೀಯ ಸಂಸ್ಥೆಗಳಲ್ಲಿ ಓದುವ,** ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳ ಪ್ರೋತ್ಸಾಹ ಧನ, 2 ಲಕ್ಷಕ್ಕೆ ಹೆಚ್ಚಳ – ಎಚ್.ಸಿ. ಮಹದೇವಪ್ಪ.
- **ರಾಜ್ಯದ ಜೇನುತುಪ್ಪಕ್ಕೆ,** ತೋಟಗಾರಿಕೆ ಇಲಾಖೆಯಿಂದ, ಟ್ರೇಡ್ ಮಾರ್ಕ್ ಆಗಿ, "ಝೇಂಕಾರ" ಬ್ರ್ಯಾಂಡ್, ನೋಂದಣಿ.
- **ವಕ್ಫ್ ವಿವಾದದ ಹಿನ್ನೆಲೆ,** ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್, ಭೇಟಿ; ರಾಜ್ಯದ 500ಕ್ಕೂ ಹೆಚ್ಚು ರೈತರಿಂದ ಅರ್ಜಿ ಸ್ವೀಕಾರ.
- **ಮೂರು ದಿನಗಳ** 'ಮೈಸೂರು ಸಂಗೀತ ಸುಗಂಧ ಉತ್ಸವ'ಕ್ಕೆ, ಇಂದು ಚಾಲನೆ.

<><><>

**ಈಗ ವಾರ್ತೆಗಳ ವಿವರ**

<><><>

**IIT / IIM / IISC / NIT ಯಂತಹ** ರಾಷ್ಟ್ರೀಯ ಸಂಸ್ಥೆಗಳಲ್ಲಿ ಓದುವ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪ್ರೋತ್ಸಾಹ ಧನವನ್ನು, ಒಂದು ಲಕ್ಷದಿಂದ 2 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿದೆ ಎಂದು, ಸಮಾಜ ಕಲ್ಯಾಣ ಖಾತೆ ಸಚಿವ ಎಚ್.ಸಿ. ಮಹದೇವಪ್ಪ ತಿಳಿಸಿದ್ದಾರೆ. ಪಿ.ಯು.ಸಿ. ಪರೀಕ್ಷೆಯಲ್ಲಿ, ಶೇಕಡ 95ಕ್ಕೂ ಹೆಚ್ಚಿನ ಅಂಕಗಳನ್ನು ಪಡೆದು, ನೀಟ್ ಪ್ರವೇಶ ಪರೀಕ್ಷೆಯ ಮೂಲಕ, ಸರ್ಕಾರಿ ಕೋಟಾದಡಿ ಪ್ರವೇಶ ದೊರಕದೇ, ಮ್ಯಾನೇಜ್‌ಮೆಂಟ್ ಕೋಟಾದಡಿ, ಎಂ.ಬಿ.ಬಿ.ಎಸ್. ಕೋರ್ಸ್‌ಗೆ ಸೀಟು ಪಡೆದುಕೊಂಡ. ಪರಿಶಿ ್ಟ ಸಮುದಾಯದ ಮಕ್ಕಳಿಗೆ, 25 ಲಕ್ಷ ರೂಪಾಯಿ ಶುಲ್ಕ ಧನವನ್ನು ಒದಗಿಸಲು, ಸರ್ಕಾರ ತೀರ್ಮಾನಿಸಿದೆ ಎಂದು, ಮಾಹಿತಿ ನೀಡಿದ್ದಾರೆ. ಡಾಕ್ಟರ್ ಬಾಬಾಸಾಹೇಬರ ಅಪೇಕ್ಷೆಯಂತೆ, 'ಪ್ರಬುದ್ಧ ಯೋಜನೆ'ಯಡಿ, ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ತಮ್ಮ ಸರ್ಕಾರ ಹೆಚ್ಚಿಸಿದೆ ಎಂದಿದ್ದಾರೆ.

<><><>

**ಕೇಂದ್ರ ಸರ್ಕಾರ ಪ್ರಾರಂಬಿಸಲಿರುವ ಹೊಸ** ಪಿ.ಎಂ. ವಿದ್ಯಾಲಕ್ಷ್ಮೀ ಯೋಜನೆ, ಆರ್ಥಿಕ ಸಮಸ್ಯೆಯಿಂದ, ಉನ್ನತ ಶಿಕ್ಷಣ ಮುಂದುವರಿಸಲು ಸಾಧ್ಯವಾಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ, ವರದಾನವಾಗಲಿದೆ ಎಂದು, ದಕ್ಷಿಣಕನ್ನಡ ಸಂಸದ ಬ್ರಿಜೇಶ್ ಚೌಟ ಹೇಳಿದ್ದಾರೆ. ಮಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಧಾನಮಂತ್ರಿ ವಿದ್ಯಾಲಕ್ಷ್ಮೀ ಯೋಜನೆ, ರಾಷ್ಟ್ರೀಯ ಶಿಕ್ಷಣ ನೀತಿಯಡಿ, ಪ್ರಮುಖ ಕೊಡುಗೆ. ವಾರ್ಷಿಕ 8 ಲಕ್ಷಕ್ಕಿಂತ ಕಡಿಮೆ ಆದಾಯ ಹೊಂದಿರುವ ಕುಟುಂಬದ ವಿದ್ಯಾರ್ಥಿಗಳಿಗೆ, ಉನ್ನತ ಶಿಕ್ಷಣಕ್ಕೆ ಏಳೂವರೆ ಲಕ್ಷ ರೂಪಾಯಿ ವರೆಗೆ, 8 ಲಕ್ಷ ರೂಪಾಯಿಗಿಂತ ಅಧಿಕ ಆದಾಯವಿರುವ ಕುಟುಂಬದ ವಿದ್ಯಾರ್ಥಿಗೆ, 10 ಲಕ್ಷ ರೂಪಾಯಿ ವರೆಗೆ, ಭದ್ರತೆ ಇಲ್ಲದೆ ಸಾಲ ದೊರಕಲಿದೆ ಎಂದು, ಅವರು ತಿಳಿಸಿದರು.

<><><>

**ರಾಜ್ಯದಲ್ಲಿ ಉತ್ಪಾದನೆಯಾಗುವ ಜೇನುತುಪ್ಪಕ್ಕೆ,** ತೋಟಗಾರಿಕೆ ಇಲಾಖೆ, "ಝೇಂಕಾರ" ಬ್ರ್ಯಾಂಡ್ ಮತ್ತು 'ಜೀವನೋಲ್ಲಾಸಕ್ಕೆ ಜೇನು' ಘೋಷವಾಕ್ಯದೊಂದಿಗೆ, ಲೋಗೋ ಮತ್ತು ಪ್ಯಾಕೇಜಿಂಗ್ ವಿನ್ಯಾಸ ರೂಪಿಸಿದೆ. ತೋಟಗಾರಿಕೆ ಇಲಾಖೆ, Trade Mark Registry ಯಿಂದ, ಅಧಿಕೃತವಾಗಿ ಅನುಮೋದನೆ ಪಡೆದಿದೆ. ರಾಜ್ಯದ ಜೇನುತುಪ್ಪ ಉತ್ಪಾದಕರು ಮತ್ತು ಸಂಗ್ರಾಹಕರು, 'ರತ್ತು ಮತ್ತು ನಿಬಂಧನೆಗೆ ಒಳಪಟ್ಟು, ಈ ಬ್ರ್ಯಾಂಡ್ ಮತ್ತು ಲೋಗೋ ಬಳಸಿಕೊಂಡು, ಜೇನುತುಪ್ಪ ಮತ್ತು ಉಪ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗೆ, ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರ ಕಚೇರಿಯನ್ನು ಜೇನು ಕೃಷಿಕರು ಸಂಪರ್ಕಿಸಬಹುದು.

<><><>

**ಕೇಂದ್ರದ ನೀತಿ ಆಯೋಗ,** ಸಂಪೂರ್ಣತಾ ಅಭಿಯಾನದಡಿ, ಉತ್ತರಕನ್ನಡ ಜಿಲ್ಲೆಯ ಮುಂಡಗೋಡನ್ನು, ಮಹತ್ವಾಕಾಂಕ್ಷೆ ತಾಲೂಕು ಎಂದು ಗುರುತಿಸಿದ ಹಿನ್ನೆಲೆ, ಸ್ವಚ್ಛ ಭಾರತ ಮಿಷನ್ ಯೋಜನೆಯ ಪ್ರಗತಿಯನ್ನು, ಜಿಲ್ಲಾ ಪಂಚಾಯಿತಿ ಆಡಳಿತ ಶಾಖೆಯ ಉಪ ಕಾರ್ಯದರ್ಶಿ, ನಾಗೇಶ್ ರಾಯ್ಕರ್ ಪರಿಶೀಲಿಸಿದರು. ಮುಂಡಗೋಡ ತಾಲೂಕಿನ ಚಿಗಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ, ಸ್ವಚ್ಛ ಸಂಕೀರ್ಣ ಘನ ತ್ಯಾಜ್ಯ ಸಂಪನ್ಮೂಲ ಘಟಕ ಹಾಗೂ ಪಾಳಾ ಗ್ರಾಮ ಪಂಚಾಯಿತಿಯ ಇಂಗಳಕಿ ಗ್ರಾಮದಲ್ಲಿ, ಬಹುಗ್ರಾಮ ಘನ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಭೇಟಿ ನೀಡಿ, ಪರಿವೀಕ್ಷಿಸಿದರು.

<><><>

**ಮೆದುಳು ನಿಷ್ಕ್ರಿಯಗೊಂಡು ಮೃತಪಟ್ಟ,** ಬೆಂಗಳೂರಿನ 43 ವರ್ಷದ ಮಾರ್ಕಂಡ ಅವರ ಅಂಗಾಂಗಗಳನ್ನು ದಾನ ಮಾಡಿ, ಅವರ ಕುಟುಂಬಸ್ಥರು ಐದು ಜನರ ಬದುಕಿನಲ್ಲಿ ಹೊಸ ಭರವಸೆ ಮೂಡಿಸಿದ್ದಾರೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಮಾರ್ಕಂಡ ಅವರು, ಸಾವಿನಲ್ಲೂ ಸಾರ್ಥಕತೆ

ಮೆರೆದಿದ್ದಾರೆ. ಮರಣದ ನಂತರವೂ ಅಂಗಾಂಗ ದಾನದ ಮೂಲಕ ಬದುಕಬಹುದು ಎಂಬುದಕ್ಕೆ ಅವರು ನಿದರ್ಶನ. ಆರೋಗ್ಯ ಇಲಾಖೆಯ 'ಜೀವ ಸಾರ್ಥಕತೆ' ಜಾಲತಾಣದಲ್ಲಿ, ಅಂಗಾಂಗ ದಾನಕ್ಕೆ ನೋಂದಣಿ ಮಾಡಿಕೊಂಡು, ಅಮೂಲ್ಯ ಜೀವಗಳ ಉಳಿವಿಗೆ ನೆರವಾಗುವಂತೆ, ಅವರು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮನವಿ ಮಾಡಿದ್ದಾರೆ.

<><><>

**ಹಾವೇರಿ ಜಿಲ್ಲೆ, ಶಿಗ್ಗಾಂವಿ ವಿಧಾನಸಭಾ ಕ್ಷೇತ್ರದ** ಉಪ ಚುನಾವಣೆಗೆ, ಬುಧವಾರ 13ನೇ ತಾರೀಖು, ಮತದಾನ ನಡೆಯಲಿದೆ. 'ವಿಜಿಲಂಟ್ ಸಿಟಿಜನ್', ಸಿ–ವಿಜಿಲ್ ಅಪ್ಲಿಕೇಶನ್ ಮೂಲಕ, ಸಾರ್ವಜನಿಕರು ಈ ವರೆಗೆ, ಮಾದರಿ ನೀತಿ ಸಂಹಿತೆ ಉಲ್ಲಂಘನೆಯ, 276 ಪ್ರಕರಣಗಳನ್ನು ದಾಖಲಿಸಿದ್ದಾರೆ. ಜಿಲ್ಲಾ ಚುನಾವಣಾಧಿಕಾರಿ ವಿಜಯಮಹಾಂತೇಶ ದಾನಮ್ಮನವರ, ಪ್ರದೇಶ ಸಮಾಚಾರಕ್ಕಾಗಿ, ಈ ಕುರಿತು ಮಾಹಿತಿ ನೀಡಿದ್ದಾರೆ.

<><><>

**ವಿಜಯಮಹಾಂತೇಶ ದಾನಮ್ಮನವರ ಧ್ವನಿ 46 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ವಕ್ಫ್ ವಿವಾದದ ಹಿನ್ನೆಲೆ, ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ** ಜಗದಾಂಬಿಕಾ ಪಾಲ್, ವಿಜಯಪುರ ಜಿಲ್ಲೆಯಲ್ಲಿ ಪರಿಶೀಲನೆ ಕೈಗೊಂಡು, ರೈತರಿಂದ ಮಾಹಿತಿ ಪಡೆದರು. ರಾಜ್ಯದಲ್ಲಿ 500ಕ್ಕೂ ಹೆಚ್ಚು ರೈತರಿಂದ ಅವರು ಅರ್ಜಿ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಹಲವು ರೈತರು ಮನವಿ ಸಲ್ಲಿಸಿದ್ದು, ಜಂಟಿ ಸಂಸದೀಯ ಸಮಿತಿ, ವಕ್ಫ್ ಮಸೂದೆಯಲ್ಲಿ ಬದಲಾವಣೆ ತರಲು ನಿರ್ಧರಿಸಿದೆ ಎಂದು, ಹೇಳಿದರು. ರಾಜ್ಯ ಸರ್ಕಾರ ಆರ್.ಟಿ.ಸಿ. ಬದಲಾವಣೆ ಮಾಡುತ್ತಿರುವುದು ಸಲ್ಲ. ಶೀಘ್ರವೇ ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು, ಭರವಸೆ ನೀಡಿದರು.

<><><>

**ವಿಜಯಪುರಕ್ಕೆ ತೆರಳುವ ಮುನ್ನ,** ಹುಬ್ಬಳ್ಳಿಯಲ್ಲಿ ಕೇಂದ್ರ ಸಚಿವ ವಿ. ಸೋಮಣ್ಣ, ಸಂಸದ ಬಸವರಾಜ ಬೊಮ್ಮಾಯಿ, ವಿಧಾನ ಪರಿ ‘ತ್ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹಾಗೂ ವಿಧಾನಸಭೆ ವಿಪಕ್ಷ ಉಪ ನಾಯಕ ಅರವಿಂದ ಬೆಲ್ಲದ ಸೇರಿದಂತೆ, ಬಿಜೆಪಿ ನಾಯಕರ ನಿಯೋಗ, ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.

<><><>

**ಐನೂರಿಂದ ಸಾವಿರ ವ ‘ಗಳ** ್ಟಿ, ಹಳೆಯ ದಾಖಲೆ ಇರುವ ರೈತರ ಜಮೀನು, ಆಸ್ತಿಗಳು, ದೇವಾಲಯಗಳ ತಲೆತಲಾಂತರದ ಜಮೀನುಗಳನ್ನು, ವಕ್ಫ್ ಬೋರ್ಡ್ ಆಸ್ತಿ ಎಂದು ಘೋಷಿಸಲಾಗುತ್ತಿದೆ; ಇಂದು ಸಮಂಜಸವಲ್ಲ. ಈ ಬಗ್ಗೆ ಕೂಲಂಕ ‘ವಾಗಿ ಪರಿಶೀಲನೆ ನಡೆಸಲಾಗುವುದು ಎಂದು, ವಕ್ಫ್ ಕಾಯ್ದೆ ತಿದ್ದುಪಡಿ ಕುರಿತ, ಸಂಸತ್ತಿನ ಜಂಟಿ ಸದನ ಸಮಿತಿ ಅಧ್ಯಕ್ಷ, ಜಗದಾಂಬಿಕಾ ಪಾಲ್, ನಿಯೋಗಕ್ಕೆ ಸ್ಪಷ್ಟ ಪಡಿಸಿದರು.

<><><>

**ಇಂದಿನಿಂದ ಮೂರು ದಿನಗಳ ಕಾಲ,** ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಸಭಾಂಗಣದಲ್ಲಿ, 'ಮೈಸೂರು ಸಂಗೀತ ಸುಗಂಧ ಉತ್ಸವ' ಆಯೋಜಿತವಾಗಿದೆ. ಪ್ರವಾಸೋದ್ಯಮ, ಸಂಸ್ಕೃತಿ, ಜವಳಿ ಸಚಿವಾಲಯಗಳು, ಸಂಗೀತ ನಾಟಕ ಅಕಾದೆಮಿಯ ಸಹಯೋಗದಲ್ಲಿ, ಸಾಂಸ್ಕೃತಿಕ ದಾಸ ಪರಂಪರೆಯ ಸಂಗೀತ ಪ್ರದರ್ಶನ ಜರುಗಲಿದೆ. ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್ ಅವರು, ಇಂದು ಬೆಳಗ್ಗೆ 10.30ಕ್ಕೆ ಉದ್ಘಾಟಿಸಲಿದ್ದಾರೆ. 21 ಹೆಸರಾಂತ ಕಲಾವಿದರು ದಾಸ ಹಾಗೂ ಸಂತ, ಕವಿಗಳ ಪರಂಪರೆಯನ್ನು ಪ್ರದರ್ಶಿಸಲಿದ್ದಾರೆ.

<><><>

**ರಾಷ್ಟ್ರೀಯ ಕ್ಯಾನ್ಸರ್ ಜಾಗೃತಿ ದಿನವನ್ನು** ನಿನ್ನೆ ಆಚರಿಸಲಾಯಿತು. ಕ್ಯಾನ್ಸರ್ ತಡೆಗಟ್ಟುವಿಕೆ, ಆರಂಭಿಕ ಹಂತದಲ್ಲಿ ಪತ್ತೆ ಮತ್ತು ಚಿಕಿತ್ಸೆಯ ಬಗ್ಗೆ ಜಾಗೃತಿ ಮೂಡಿಸಲು, ಕಳೆದ 2014 ರಿಂದ ನವೆಂಬರ್ 7ನೇ ತಾರೀಖು, ರಾಷ್ಟ್ರೀಯ ಕ್ಯಾನ್ಸರ್ ದಿನವನ್ನಾಗಿ ಆಚರಿಸಲಾಗುತ್ತಿದೆ. ನವೆಂಬರ್ 7ನೇ ತಾರೀಖು, ಕ್ಯಾನ್ಸರ್ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ವಹಿಸುವ, ರೇಡಿಯಂ ಮತ್ತು ಪೊಲೊನಿಯಂನ್ನು ಸಂಶೋಧಿಸಿದ, ಭೌತ ಮತ್ತು ರಸಾಯನ ಶಾಸ್ತ್ರಜ್ಞೆ ಮೇರಿ ಕ್ಯೂರಿಯವರ ಜನ್ಮ ದಿನವಾಗಿದೆ.

<><><>

**ಹುಬ್ಬಳ್ಳಿಯ, ನವನಗರದ ಕರ್ನಾಟಕ** ಕ್ಯಾನ್ಸರ್ ಚಿಕಿತ್ಸೆ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಹಾಗೂ ಶಸ್ತ್ರ ಚಿಕಿತ್ಸಾ ತಜ್ಞ ಡಾಕ್ಟರ್ ಬಿ.ಆರ್.ಪಾಟೀಲ, ಸ್ತನ ಕ್ಯಾನ್ಸರ್ ಜಾಗ್ರತಿ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

**ತಜ್ಞ ಡಾಕ್ಟರ್ ಬಿ.ಆರ್.ಪಾಟೀಲ ಧ್ವನಿ 40 ಸೆಕೆಂದುಗಳು**

<><><>

**ವರಕವಿ ಡಾಕ್ಟರ್ ದ.ರಾ.ಬೇಂದ್ರೆ ಅವರ,** 'ನಾಕುತಂತಿ' ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ ಸಂದು, ಇಂದಿಗೆ 50 ವರ್ಷಗಳು. ಕನ್ನಡಕ್ಕೆ ಎರಡನೇ ಜ್ಞಾನಪೀಠ ಪುರಸ್ಕಾರ ಸಂದ, ಸುವರ್ಣ ಸಂಭ್ರಮದ ಹಿನ್ನೆಲೆ, ಧಾರವಾಡ ಆಕಾಶವಾಣಿಯ ಧ್ವನಿ ಮುದ್ರಣ ಭಂಡಾರದಿಂದ, 50 ವರ್ಷಗಳ ಹಿಂದೆ, 1974ರಲ್ಲಿ ಮುದ್ರಣಗೊಂಡು, ಪ್ರಸಾರವಾದ, ಕವಿ ಬೇಂದ್ರೆ ಅವರ ಸಂದರ್ಶನ, ಇಂದು ಬೆಳಗ್ಗೆ 8 ಗಂಟೆ 30 ನಿಮಿಷಕ್ಕೆ, ರಾಜ್ಯವ್ಯಾಪಿ ಪ್ರಸಾರವಾಗಲಿದೆ. ಪ್ರೊಫೆಸರ್ ಕೆ.ಎಸ್. ಶರ್ಮಾ ಹಾಗೂ ಎನ್. ರಾಜಾರಾಮ್ ಅವರು, ಕವಿ ಬೇಂದ್ರೆ ಅವರನ್ನು ಸಂದರ್ಶಿಸಿದ್ದಾರೆ. ಧಾರವಾಡ ಆಕಾಶವಾಣಿಯ, ಯುಟ್ಯೂಬ್ ಚಾನಲ್ ಹಾಗೂ ನ್ಯೂಸ್ ಆನ್ ಏರ್ ಆಪ್‌ನಲ್ಲೂ ತಾವು, ಈ ಸಂದರ್ಶನವನ್ನು ಆಲಿಸಬಹುದು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ರಾಷ್ಟ್ರೀಯ ಸಂಸ್ಥೆಗಳಲ್ಲಿ ಓದುವ,** ಪರಿಶಿಷ್ಟ ಸಮುದಾಯದ ವಿದ್ಯಾರ್ಥಿಗಳ ಪ್ರೋತ್ಸಾಹ ಧನ, 2 ಲಕ್ಷಕ್ಕೆ ಹೆಚ್ಚಳ – ಎಚ್.ಸಿ. ಮಹದೇವಪ್ಪ.
- **ರಾಜ್ಯದ ಜೇನುತುಪ್ಪಕ್ಕೆ,** ತೋಟಗಾರಿಕೆ ಇಲಾಖೆಯಿಂದ, ಟ್ರೇಡ್ ಮಾರ್ಕ್ ಆಗಿ, "ಝೇಂಕಾರ" ಬ್ರ್ಯಾಂಡ್, ನೋಂದಣಿ.
- **ವಕ್ಫ್ ವಿವಾದದ ಹಿನ್ನೆಲೆ,** ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಜಗದಾಂಬಿಕಾ ಪಾಲ್, ಭೇಟಿ; ರಾಜ್ಯದ 500ಕ್ಕೂ ಹೆಚ್ಚು ರೈತರಿಂದ ಅರ್ಜಿ ಸ್ವೀಕಾರ.
- **ಮೂರು ದಿನಗಳ** 'ಮೈಸೂರು ಸಂಗೀತ ಸುಗಂಧ ಉತ್ಸವ'ಕ್ಕೆ, ಇಂದು ಚಾಲನೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>

**ಹರ್ಷ**